ಸಂಪರ್ಕಿಸುವುದು ಹಾಗೂ ವಿದ್ಯುತ್ ಯಂತ್ರಗಳ ಮೂಲಕ ಮೇಲ್ಮಟ್ಟ ಜನಸಂಗ್ರಹಾಗಾರಗಳಿಗೆ ಸಂಪರ್ಕಿಸಬೇಕಾಗುತ್ತದೆ. ಆದುದರಿಂದ, ಸದರಿ ಪಟ್ಟಣಕ್ಕೆ ಕುಡಿಯುವ ನೀರನ ಅಭಿವೃದ್ಧಿ ತುಂಬಾ ಅವಶ್ಯಕತೆ ಇದೆ.

ಬೆಂಗಳೂರು ಜಲಮಂಡಳಿಯು ಕೈಗೆತ್ತಿಕೊಂಡಿರುವ ಮೂರನೇ ಯೋಜನೆಯಿಂದ ದೊರಕುವ ಹೆಚ್ಚಿನ ನೀರು ನಗರದ ಮೂಲಕ ಅವಶ್ಯಕತೆಯನ್ನು ನಿವಾರಿಸಲು ಸಾಧ್ಯವಾಗದೆ ಇರುವುದಿರಿಂದ ಕನಕಪುರ ನಗರಕ್ಕೆ ಕಾವೇರಿ ನದಿ ನೀರನ್ನು ಕೊಡಲು ಸಾಧ್ಯವಾಗುವುದಿಲ್ಲ, ಮೇಲಿನ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಒಂದು ಅಭಿವೃದ್ಧಿ ಯೋಜನೆಯನ್ನು ರೂ. 38.00 ಲಕ್ಷರೂ ಗಳಿಗೆ ತಯಾರಿಸಲಾಗಿದೆ. ಈ ಯೋಜನೆಯಲ್ಲಿ 6 ಕೊಳವೆ ಬಾವಿಗಳನ್ನು ತೋಡುವುದು ಹಾಗೂ ಹಾಲಿ ಇರುವ ಹೆಚ್ಚುವರಿ ಕೊಳವೆ ಬಾವಿಯ ನೀರನ್ನು ಸಂಪ್‌ಗೆ ಮತ್ತು ಸಂಪಿನಿಂದ ನೇರವಾಗಿ ಎರಡು 5.00 ಲಕ್ಷ ಲೀಟರ್ ಸಾಮರ್ಥ್ಯದ ಮೇಲ್ಮಟ್ಟದ ಜಲಸಂಗ್ರಹಾಗಾರಗಳಿಗೆ ಕೊಂಡೊಯ್ಯಲು ವಿನ್ಯಾಸ ಮಾಡಲಾಗಿದೆ. ಮೇಲೇನ ಯೋಜನೆಯನ್ನು ಜೀವವಿಮಾ ನಿಗಮದ ಆರ್ಥಿಕ ನೆರವಿನ ಮೇರೆಗೆ ಮತ್ತು ಸರ್ಕಾರದ ಸಾಲ ಮತ್ತು ಪುರಸಭೆಯವರ ಹಣಸಹಾಯದ ಮೇರೆಗೆ ತೆಗೆದುಕೊಳ್ಳಲು ಉದ್ದೇಶಿಸಲಾಗಿದೆ.

ಸರ್ಕಾರವು, ಸರ್ಕಾರದ ಆಜ್ಞೆಯ ಸಂಖ್ಯೆ : ಆರ್‌ಡಿಪಿ 122 ಟಿಎಸ್‌ವೈ 90 ದಿನಾಂಕ 5-2-1991 ಮತ್ತು ಆರ್‌ಡಿಪಿ 122 ಟಿ.ಎಸ್ 90 ದಿನಾಂಕ 23-2-91ರಲ್ಲಿ ಕ್ರಮವಾಗಿ 10.00 ಲಕ್ಷ ರೂ. ಗಳಂತೆ ಒಟ್ಟು 20.00 ಲಕ್ಷಗಳನ್ನು ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿಯವರಿಗೆ ಪ್ರಕೃತಿ ವಿಕೋಪ ಪರಿಹಾರ ನಿಧಿಯಲ್ಲಿ ಹಣವನ್ನು ಬಿಡುಗಡೆ ಮಾಡಿದ್ದಾರೆ.

15 ಕೊಳವೆ ಬಾವಿಗಳನ್ನು ಕೊರೆದು ಕೈ ಪಂಪುಗಳನ್ನು ಅಳವಡಿಸಲು ರೂ.5.00 ಲಕ್ಷಗಳು ಬೇಕಾಗುತ್ತದೆ. ಇದಕ್ಕೆ ಅಗತ್ಯವಾದ ಹಣವನ್ನು ಜಿಲ್ಲಾಧಿಕಾರಿಯವರು ಒದಗಿಸಬೇಕೆಂದು ಆದೇಶ ನೀಡಲಾಗುವುದು.

4) ಚಿಕ್ಕಮಗಳೂರು ಜಿಲ್ಲೆಯಲ್ಲಿ ಅಡಿಕೆ, ತೋಟಗಳಿಗೆ ಹಳದಿ ರೋಗ.

ಶ್ರೀ ಯು.ಕೆ. ಶಾಮಣ್ಣ (ಶೃಂಗೇರಿ) : ಚಿಕ್ಕಮಗಳೂರು ಜಿಲ್ಲೆಯ ಅನೇಕ ಭಾಗಗಳಲ್ಲಿ ಮೆಗುಂಡಾ ಹೋಬಳಿಯ ಸಂಪೂರ್ಣ ಭಾಗದಲ್ಲಿ ಅಡಿಕೆ ತೋಟಗಳಿಗೆ ಹಳದಿ ಎಲೆ ರೋಗ ತಗುಲಿ ಸಂಪೂರ್ಣ ಮರಗಳು ನಾಶವಾಗಿ ನಿಂತಿವೆ. ಇದ ಸರಕಾರದ ಗಮನಕ್ಕೆ ಬಂದಿದೆಯೇ? ಈ ರೋಗ ನಿವಾರಣೆಗೆ ಬಗ್ಗೆ ಸರಕಾರ ಈಗ ಏನು ಕ್ರಮ ಕೈಗೊಂಡಿರುತ್ತದೆ ತಿಳಿಸಿ. ಅಡಿಕೆ ಮರದ ಬದಲಿಗೆ ಆ ಜಾಗದಲ್ಲಿ ಬೇರೆ ಬೆಳೆ ಬೆಳೆಯಲು ತಾಳಿಮರ ಏಲಕ್ಕಿ ಬೆಳೆಯಲು ಸರಕಾರ ಸಹಾಯಧನ ಕೊಡಬಹುದೇ ತಿಳಿಸಿ.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಕೃಷಿ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಕೊಪ್ಪ ತಾಲ್ಲೂಕಿನಲ್ಲಿ ಅಡಿಕೆ ತೋಟಗಳು ಹಳದಿ ಎಲೆ ರೋಗದ ಭಾದೆಗೆ ತುತ್ತಾಗಿರುವುದು ಈಗಾಗಲೇ ಸರ್ಕಾರದ ಗಮನಕ್ಕೆ ಬಂದಿದೆ. ಈ ಬಗ್ಗೆ ಕೃಷಿ ವಿಶ್ವವಿದ್ಯಾಲಯ ಮತ್ತು ಕೇಂದ್ರೀಯ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆಗಳು ಹಲವಾರು ವರ್ಷಗಳಿಂದ ಸಂಶೋಧನೆ ನಡೆಸುತ್ತಿದ್ದರೂ, ಈ ರೋಗದ ಕಾರಣ ತಿಳಿದು ಬಂದಿಲ್ಲ. ಇದರಿಂದಾಗಿ ಈ ರೋಗದ ಹತೋಟಿ ಕ್ರಮವನ್ನು ಪರಿಣಾಮಕಾರಿಯಾಗಿ ಮಾಡಲು ಸಾಧ್ಯವಾಗುತ್ತಿಲ್ಲ. ಆದಾಗ್ಯೂ, ಕೃಷಿ ವಿಶ್ವವಿದ್ಯಾನಿಲಯದ ಸಲಹೆಯಂತೆ ಕೊಪ್ಪ ತಾಲ್ಲೂಕಿನಲ್ಲಿ 2-3 ವರ್ಷಗಳಿಂದ ತೋಟಗಾರಿಕೆ ಇಲಾಖೆಯು ರೈತರ ತೋಟಗಳಲ್ಲಿ 2 ಪ್ರಾತ್ಯಕ್ಷಿತೆಗಳನ್ನು (Adoptive trails) ಏರ್ಪಡಿಸುತ್ತಿದೆ.

ಈ ರೋಗವು ರಾಜ್ಯದ ಚಿಕ್ಕಮಗಳೂರು ಜಿಲ್ಲೆಯಲ್ಲದೆ ದಕ್ಷಿಣ ಕನ್ನಡ, ಉತ್ತರ ಕನ್ನಡ, ಶಿವಮೊಗ್ಗ, ಹಾಸನ ಮತ್ತು ಕೊಡಗು ಜಿಲ್ಲೆಗಳಲ್ಲೂ ಕಂಡು ಬಂದಿದ್ದು, ಅದರ ಸಮೀಕ್ಷೆಯನ್ನು ಕೃಷಿ ಇಲಾಖೆ, ಕೃಷಿ ವಿಶ್ವವಿದ್ಯಾನಿಲಯ. ಕೇಂದ್ರೀಯ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆ (ಸಿ.ಪಿಸಿಆರ್.ಐ) ಇವುಗಳ ಸಂಯುಕ್ತ ಆಶ್ರಯದಲ್ಲಿ ನಡೆಸಲಾಗಿದೆ. ಈ ರೋಗವು 40 ವರ್ಷಕ್ಕೂ ಹಳೆಯದಾಗಿದ್ದು, ಅದಕ್ಕೆ ಕಾರಣವಾದ ಜೀವಾಣುಗಳನ್ನು ಗುರುತಿಸುವ ಕಾರ್ಯದಲ್ಲಿ ಕೃಷಿ ವಿಶ್ವವಿದ್ಯಾನಿಲಯ ಮತ್ತು ಸಿ.ಪಿ.ಸಿ.ಆರ್.ಐ. ಸಂಸ್ಥೆಗಳು ನಿರತವಾಗಿವೆ. ಆದರೆ ಇವುಗಳ ಕಾರಣ ಇನ್ನೂ ಪತ್ತೆಯಾಗಿಲ್ಲ. ಈ ಬಗ್ಗೆ ಕೃಷಿ ವಿಶ್ವವಿದ್ಯಾನಿಲಯದ ತಾಂತ್ರಿಕ ಸಲಹೆ ಮೇರೆಗೆ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಒಟ್ಟು 8ಪ್ರಾತ್ಯಕ್ಷಿತೆಗಳನ್ನು ರೋಗಪೀಡಿತ ತೋಟಗಳಲ್ಲಿ ಏರ್ಪಡಿಸಲಾಗುತ್ತಿದೆ.

ಈ ರೋಗದಿಂದ ಹಾಳಾದ ತೋಟದ ಮಾಲೀಕರಿಗೆ ಪರಿಹಾರ ಕೊಡುವ ಯಾವುದೇ ಯೋಜನೆ ಸರ್ಕಾರ ನಿರೂಪಿಸಿಲ್ಲ. ಅಥವಾ ಹಾಳಾದ ತೋಟದ ಬದಲಿಗೆ ರಬ್ಬರ್ ಯಾಲಕ್ಕಿ ಅಥವಾ ತಾಳೆ ಮರಗಳನ್ನು ನಡೆಸುವ ಯೋಜನೆಯು ಸಧ್ಯಕ್ಕೆ ಸರ್ಕಾರದ ಮುಂದಿಲ್ಲ.

5) ಬೆಂಗಳೂರಿನ ಹಾಯಿಸ್ ರೋಡನ್ನು ಒನ್‌ವೇ ಮಾಡುವುದು.

SRI. SADAT ALI KHAN. (Channapatna) : Hayes Road in between Residencey Road and Richmond Road Which has become heavy traffic Road. The Link Road of Hayes Road Consist of Two Nursing Homes and Residential Houses. It is very difficult to even cross the road during working hours. I request the Home Minister to make the Hayes Road as one way either from Richmond Road or from Residency Road in the interest of Hayes Road residents. Will the Home Minister takes the decision early?

Sri. DHARM SINGH (Min. for Home) : Madam speaker, It is possible to make Hayes Road a one way road by prohibiting the entry of vehicles from Residency Road while allowing entry from the junction of Hayes Road and Richmond Road. By so doing. the present congestion on Hayes Road which is hardly 20' wide can be considerably lessened. Since there is a free left turn for the traffic coming from Hayes Road, at cash pharmacy circle, the proposed one way restriction will not adversely affect the traffic at cash Pharmacy Circle. On the other hand, the flow of traffic at Cash Pharmacy Circle can be facilitated to some extent by this measure. Similarly, the junction of Hayes Road with Richmand Road is not a busy junction and therefore the proposed restriction will not affect the free flow of traffic in any way. the residents of the area will not be put to any inconvenience since another smaller raod, namely, C.J. D'Souza Road, which connects Hayes Road with Residency Road can be used for entering into, as well as going out of, the D'Souza Layout. A Notification to this effect will be issuad shortly and Road signs will be erected accordingly.